# ಧರ್ಮಕಾರ್ಯಕ್ಕಾಗಿ ಜಾಹಿರಾತು ಇತ್ಯಾದಿ ಅರ್ಪಣೆ ಪಡೆಯುವುದು ಸಮಷ್ಟಿ ಸಾಧನೆ !

卐 ———— ಮನೋಗತ ———— 卐

**೧. ಕಲಿಯುಗದಲ್ಲಿ ಸಮಷ್ಟಿ ಸಾಧನೆಗೆ ಹೆಚ್ಚಿನ ಮಹತ್ತ್ವವಿರುವುದರಿಂದ ಸನಾತನದ ಸಾಧಕರು 'ಸನಾತನ ಪ್ರಭಾತ' ನಿಯತಕಾಲಿಕೆಯ ಎಲ್ಲ ಕೃತಿಗಳನ್ನು ಸಾಧನೆಯೆಂದು ಮಾಡುವುದು :** 'ಸಮಾಜದ ಮನಸ್ಸನ್ನು ರೂಪಿಸಲು ಅಮೂಲ್ಯ ನೆರವು ನೀಡಬಲ್ಲ ಮಾಧ್ಯಮಗಳೆಂದರೆ ವರ್ತಮಾನಪತ್ರಿಕೆಗಳು. ಆದ್ದರಿಂದ ಅಧ್ಯಾತ್ಮಪ್ರಸಾರದ ಪ್ರಮುಖ ಕಾರ್ಯವನ್ನು ಮಾಡುವ ಸನಾತನ ಸಂಸ್ಥೆಯು ಏಪ್ರಿಲ್ ೧೯೯೮ ರಿಂದ ಸಾಪ್ತಾಹಿಕ 'ಸನಾತನ ಪ್ರಭಾತ'ದ ಮಾಧ್ಯಮದಿಂದ ಪತ್ರಿಕೋದ್ಯಮದ ಕ್ಷೇತ್ರದಲ್ಲಿ ಕಾರ್ಯವನ್ನು ಆರಂಭಿಸಿತು. ಈಗ ಮರಾಠಿ ದಿನಪತ್ರಿಕೆ 'ಸನಾತನ ಪ್ರಭಾತ'ದ ನಾಲ್ಕು ಆವೃತ್ತಿಗಳು, ಮರಾಠಿ ಮತ್ತು ಕನ್ನಡ ಸಾಪ್ತಾಹಿಕ 'ಸನಾತನ ಪ್ರಭಾತ', ಹಿಂದಿ ಮತ್ತು ಆಂಗ್ಲ ಪಾಕ್ಷಿಕ 'ಸನಾತನ ಪ್ರಭಾತ' ಈ ನಿಯತಕಾಲಿಕೆಗಳ ಮಾಧ್ಯಮದಿಂದ ಸನಾತನ ಸಂಸ್ಥೆಯು ಅಧ್ಯಾತ್ಮದ ಪ್ರಸಾರದೊಂದಿಗೆ ರಾಷ್ಟ್ರರಕ್ಷಣೆ ಮತ್ತು ಧರ್ಮಜಾಗೃತಿಯ ಕಾರ್ಯವನ್ನೂ ಮಾಡುತ್ತಿದೆ. ಕಲಿಯುಗದಲ್ಲಿ ವ್ಯಷ್ಟಿ ಸಾಧನೆಗಿಂತ ಸಮಷ್ಟಿ ಸಾಧನೆಗೆ ಹೆಚ್ಚಿನ ಮಹತ್ತ್ವ ವಿರುವುದರಿಂದ ಸನಾತನದ ಸಾಧಕರು ಸನಾತನ ಸಂಸ್ಥೆಯ ಸಂಸ್ಥಾಪಕರಾದ ಪರಾತ್ಪರ ಗುರು ಡಾ. ಜಯಂತ ಆಠವಲೆಯವರ ಕೃಪಾಶೀರ್ವಾದದಿಂದ 'ಸನಾತನ ಪ್ರಭಾತ' ನಿಯತಕಾಲಿಕೆಗಳಿಗಾಗಿ ಸಂಪಾದಕೀಯ ಬರೆಯುವುದು, ಸಮಾಜಕ್ಕೆ ಹೋಗಿ ವಾರ್ತೆಗಳ ಸಂಕಲನ ಮಾಡುವುದರಿಂದ ಹಿಡಿದು 'ಸನಾತನ ಪ್ರಭಾತ' ಮುದ್ರಣವಾಗಿ ಮನೆಮನೆಗೆ ತಲುಪುವವರೆಗಿನ ಎಲ್ಲ ಕೃತಿಗಳನ್ನು ಸಾಧನೆಯೆಂದು ಮಾಡುತ್ತಿದ್ದಾರೆ.

**೨. ಗುರುಕಾರ್ಯ ವೃದ್ಧಿಯಾಗುವ ದೃಷ್ಟಿಯಿಂದ ಹೊಳೆದ ಹೊಸ ಹೊಸ ಪರಿಕಲ್ಪನೆಗಳು ಮತ್ತು ಜಾಹಿರಾತುಗಳನ್ನು ಪಡೆಯುವ ಸೇವೆಯನ್ನು ಮಾಡುವಾಗ ಕಲಿಯಲು ಸಿಕ್ಕಿದ ಅಂಶಗಳು :** ಪರಾತ್ಪರ ಗುರು ಡಾಕ್ಟರರ ಕೃಪೆಯಿಂದ ೧೯೯೯ ರಲ್ಲಿ ನಾನು ಮುಂಬಯಿಯಲ್ಲಿ ಜಾಹಿರಾತು ಪಡೆಯುವ ಸೇವೆಯನ್ನು ಮತ್ತು ಅದಕ್ಕಾಗಿ ಸಂಪರ್ಕ ವನ್ನು ಮಾಡಲು ಆರಂಭಿಸಿದೆ. ಅನಂತರ ವರ್ಷವಾಗುವುದರಲ್ಲಿಯೇ ನಾನು ಮಹಾರಾಷ್ಟ್ರದ ವಿವಿಧ ಜಿಲ್ಲೆಗಳಲ್ಲಿ ಜಾಹಿರಾತುಗಳ ಸಂದರ್ಭದಲ್ಲಿನ ಸೇವೆಗೆ ಹೋಗ ತೊಡಗಿದೆ. 'ಸನಾತನ ಪ್ರಭಾತ' ನಿಯತಕಾಲಿಕೆಯ ಜೊತೆಗೆ ನಾನು ಪಂಚಾಂಗ, ವಹಿ, ಬಿತ್ತಿಪತ್ರಗಳು, ಹಾಗೆಯೇ ಗ್ರಂಥ ಇತ್ಯಾದಿಗಳಿಗೂ ಜಾಹಿರಾತುಗಳನ್ನು ತರುವ ಸೇವೆಯನ್ನು ಮಾಡತೊಡಗಿದೆ. ಈ ಸೇವೆಯ ಅಂತರ್ಗತ ನನಗೆ ಗುರುಕಾರ್ಯವನ್ನು ವೃದ್ಧಿಸುವ ದೃಷ್ಟಿಯಿಂದ ಕೆಲವು ಹೊಸ ಹೊಸ ಪರಿಕಲ್ಪನೆಗಳು ಹೊಳೆಯತೊಡಗಿದವು ಮತ್ತು ಅವು ಕೃತಿಯಲ್ಲೂ ಬಂದವು, ಉದಾ. 'ಯಾವುದಾದರೊಂದು ವಿಷಯದ ಮೇಲೆ 'ಸನಾತನ ಪ್ರಭಾತ'ದ ವಿಶೇಷಾಂಕವನ್ನು ಪ್ರಕಟಿಸುವುದು, ಫ್ಲೆಕ್ಸ್‌ಗಳ ಮೂಲಕ ಪ್ರಚಾರ-ಪ್ರಸಾರ ಮಾಡುವುದು, ಸನಾತನ ಪಂಚಾಂಗ, ವಹಿ, ಗ್ರಂಥ ಇವುಗಳಿಗೆ

卐 ———— 卐

ಜಾಹಿರಾತು ಪಡೆಯುವುದು, ಹೋರ್ಡಿಂಗ್‌ಗಳ ಮೂಲಕ ಸನಾತನ ಸಂಸ್ಥೆಯ ಗ್ರಂಥಗಳ ಜಾಹಿರಾತು ಮಾಡುವುದು, ಜನರಿಗೆ ಪರಾತ್ಪರ ಗುರು ಡಾ. ಆಠವಲೆಯವರ ಜೀವನಚರಿತ್ರ ನೋಡಲು ಸಿಗಬೇಕೆಂದು ಅವರ ೭೫ ನೇ ಜನ್ಮದಿನದ ನಿಮಿತ್ತ ಚಿತ್ರಮಯ ದರ್ಶನ ಪುಸ್ತಕವನ್ನು ಪ್ರಕಟಿಸುವುದು' ಇತ್ಯಾದಿ. ಸನಾತನ ಸಂಸ್ಥೆ ಮತ್ತು ಆಶ್ರಮಗಳಿಗೆ ಬೇಕಾಗುವ ಆರ್ಥಿಕ, ಹಾಗೆಯೇ ವಸ್ತುಗಳ ಸ್ವರೂಪದಲ್ಲಿನ ಅರ್ಪಣೆ ಪಡೆಯುವ ಸೇವೆಯನ್ನೂ ನಾನು ಮಾಡುತ್ತಿದ್ದೇನೆ.

ನಾನು ಕೆಲವು ವರ್ಷಗಳ ಕಾಲ 'ಸನಾತನ ಪಂಚಾಂಗ'ಕ್ಕಾಗಿ ಜಾಹಿರಾತು ಪಡೆಯುವ ಸೇವೆಯನ್ನೂ ಮಾಡಿದೆ. ಈ ಸೇವೆಯ ನಿಮಿತ್ತ ಉತ್ತರ ಮತ್ತು ದಕ್ಷಿಣ ಭಾರತದಲ್ಲಿನ ಅನೇಕ ಸಾಧಕರ ಮತ್ತು ಜಾಹಿರಾತುದಾರರೊಂದಿಗೆ ನನ್ನ ಸಂಪರ್ಕ ವಾಯಿತು. ಆ ಸಮಯದಲ್ಲಿ ಸಮಾಜದಿಂದ ನಮಗೆ ಒಳ್ಳೆಯ ಪ್ರತಿಕ್ರಿಯೆಯೂ ದೊರಕಿತು. ನನ್ನಂತೆಯೇ ಇತರ ಕೆಲವು ಸಾಧಕರೂ ಕಳೆದ ಕೆಲವು ವರ್ಷಗಳಿಂದ ಆಯಾ ಭಾಗಗಳಲ್ಲಿ ಜಾಹಿರಾತು ಪಡೆಯುವ ಸೇವೆಯನ್ನು ಮಾಡುತ್ತಿದ್ದಾರೆ. 'ಪ್ರಸಾರಕ್ಕೆ ಹೋದಾಗ ಹೇಗೆ ಮಾತನಾಡಬೇಕು, ಉದ್ಯಮಿಗಳೊಂದಿಗೆ ಆತ್ಮೀಯತೆಯನ್ನು ಹೇಗೆ ಸಾಧಿಸಬೇಕು' ಇಂತಹ ಅನೇಕ ಅಂಶಗಳು ಜಾಹಿರಾತು ಪಡೆಯುವ ಸಾಧಕರಿಗೆ ಕಲಿಯಲು ಸಿಕ್ಕಿದವು. ಅವುಗಳಲ್ಲಿ ಮುಂದಿನ ಕೆಲವು ಅಂಶಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ಅ. ವರ್ತಮಾನಪತ್ರಿಕೆಗಳನ್ನು ಮುದ್ರಿಸುವುದು ಸಮಷ್ಟಿ ಸಾಧನೆಯ ಉತ್ತಮ ಮಾಧ್ಯಮವಾಗಿದೆ. ಈ ಸೇವೆಯ ಒಂದು ಮುಖ್ಯ ಭಾಗವೆಂದರೆ ಜಾಹಿರಾತುಗಳನ್ನು ಪಡೆಯುವುದು

ಆ. ಜಾಹಿರಾತುಗಳನ್ನು ಪಡೆಯುವುದು ಹೇಗೆ ಸಾಧನೆಯಾಗಿದೆ ? ಜಾಹಿರಾತು ಗಳನ್ನು ಪಡೆಯುವ ಮಾಧ್ಯಮದಿಂದ ಸಾಧನೆಯಾಗಲು ಸಾಧಕನಲ್ಲಿ ಯಾವ ಗುಣ ಗಳಿರುವುದು ಆವಶ್ಯಕವಾಗಿದೆ ? ಜಾಹಿರಾತುದಾರರ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಗೆ ಕೊಡಬೇಕು ?

ಇ. ಜಾಹಿರಾತು ಪಡೆಯುವ ಸೇವೆಯು ಪರಿಪೂರ್ಣವಾಗಲು ಆರಂಭದಿಂದ ಜಾಹಿರಾತು ಮುದ್ರಿಸಿದ ಸಂಚಿಕೆಯನ್ನು ಜಾಹಿರಾತುದಾರರಿಗೆ ತಲುಪಿಸುವ ತನಕ ಮಾಡಬೇಕಾದ ಆಯೋಜನೆ ಇತ್ಯಾದಿ.

ಇದರ ಹೊರತು ಈ ಗ್ರಂಥಮಾಲಿಕೆಯಲ್ಲಿ ಮುಂದಿನ ವಿವಿಧ ವಿಷಯಗಳ ಮೇಲೆ ಗ್ರಂಥಗಳು ಪ್ರಕಾಶನವಾಗಲಿವೆ.

೧. ಸಾಧಕರು ಜಾಹಿರಾತು ಪಡೆಯಲು ಮಾಡಿದ ಪ್ರಯತ್ನ

೨. ಸಾಧಕರಿಗೆ ಜಾಹಿರಾತುಗಳನ್ನು ಪಡೆಯುವಾಗ ಬಂದಿರುವ ಒಳ್ಳೆಯ ಮತ್ತು ಕೆಟ್ಟ ಅನುಭವಗಳು, ಅನುಭೂತಿಗಳು ಮತ್ತು ಕಲಿಯಲು ಸಿಕ್ಕಿದ ಅಂಶಗಳು, ತಮ್ಮಲ್ಲಾದ ಬದಲಾವಣೆಗಳು

೩. ಜಾಹಿರಾತುದಾರರಿಂದ ದೊರಕಿದ ಉತ್ತಮ ಪ್ರತಿಕ್ರಿಯೆಗಳು

೪. ಜಾಹಿರಾತುಗಳನ್ನು ನೀಡಿದುದರಿಂದ ಜಾಹಿರಾತುದಾರರಿಗೆ ತಮ್ಮ ವ್ಯಾಪಾರ ಮತ್ತು ವೈಯಕ್ತಿಕ ಸ್ವರೂಪದಲ್ಲಿ ಬಂದ ಅನುಭೂತಿಗಳು

೫. ಜಾಹಿರಾತುದಾರರು ಸಾಧಕರಾಗುವುದು

೬. ಜಾಹಿರಾತು ಪಡೆಯುವ ಸೇವೆಯಲ್ಲಿ ಸಂತರ ಸಂಕಲ್ಪದಿಂದ ಬಂದ ಅನುಭವ

೭. ಶ್ರೀಮತಿ ಸ್ಮಿತಾ ನವಲಕರ ಇವರ ಸಾಧನಾಪ್ರವಾಸ

**೩. ‘ಪರಾತ್ಪರ ಗುರು ಡಾ. ಆಠವಲೆಯವರ ಶಬ್ದವೆಂದರೆ ಕಲ್ಲಿನ ಮೇಲೆ ಕೊರೆದ ರೇಖೆ !’ ಎಂಬುದರ ಬಗ್ಗೆ ಬಂದ ಅನುಭವ :** ೨೦೦೨ ರಲ್ಲಿ ಪರಾತ್ಪರ ಗುರು ಡಾ. ಆಠವಲೆಯವರನ್ನು ಭೇಟಿ ಮಾಡಿದಾಗ ಅವರು ನನಗೆ, “ನಮಗೆ ‘ಜಾಹಿರಾತುಗಳನ್ನು ಪಡೆಯುವುದು’ ಎಂಬ ವಿಷಯದಲ್ಲಿ ಸನಾತನ ಸಂಸ್ಥೆಯ ಗ್ರಂಥವನ್ನು ಪ್ರಕಾಶಿಸಬೇಕಾಗಿದೆ” ಎಂದರು. ಆಗ ನಾನು ಕೇವಲ ‘ಆಗಬಹುದು’ ಎಂದೆ. ಅನಂತರ ನನ್ನ ಮನಸ್ಸಿನಲ್ಲಿ, ‘ಈ ವಿಷಯದಲ್ಲಿ ಹೆಚ್ಚೆಂದರೆ ಸಣ್ಣ ಕೈಪಿಡಿ (ಮ್ಯಾನ್ಯುಯಲ್) ತಯಾರಾಗಬಹುದು’ ಎಂಬ ವಿಚಾರ ಬಂದಿತು. ಆದರೆ ಅನಂತರ ಪ್ರತ್ಯಕ್ಷ ಸೇವೆಯನ್ನು ಆರಂಭಿಸಿದಾಗ ‘ಜಾಹಿರಾತು ಸೇವೆ’ಯೆಂದರೆ ಸಮಷ್ಟಿ ಸಾಧನೆಯ ಉತ್ತಮ ಮಾಧ್ಯಮವಾಗಿದೆ !’ ಎಂಬುದನ್ನು ಈಶ್ವರನು ನನಗೆ ಅರಿವು ಮಾಡಿಕೊಟ್ಟನು. ಈಗ ಈ ಸೇವೆಯಿಂದ ‘ಜಾಹಿರಾತುಗಳ ಸಂದರ್ಭದಲ್ಲಿ ಕಲಿಯಲು ಸಿಕ್ಕಿದ ಅಂಶಗಳು, ಅನುಭವ, ಅನುಭೂತಿ, ಸೇವೆಯ ಮಹತ್ವ’ ಇತ್ಯಾದಿ ಮಾಹಿತಿಗಳನ್ನು ಈ ಗ್ರಂಥದ ಮಾಧ್ಯಮದಿಂದ ಗುರುಚರಣಗಳಲ್ಲಿ ಅರ್ಪಣೆ ಮಾಡುವ ಅವಕಾಶವನ್ನು ಈಶ್ವರನು ನಮಗೆ ನೀಡಿದನು, ಇದಕ್ಕಾಗಿ ಕೃತಜ್ಞತೆಗಳು ! ಇಸವಿ ೨೦೦೨ ರಲ್ಲಿ ಗುರುದೇವರು ಮಾಡಿದ ಸಂಕಲ್ಪವು ಈಗ ೨೦೨೦ ರಲ್ಲಿ ಪೂರ್ಣವಾಗುತ್ತಿದೆ. ‘ಗುರುದೇವ ಪರಾತ್ಪರ ಗುರು ಡಾಕ್ಟರರ ಶಬ್ದವೆಂದರೆ ಕಲ್ಲಿನಲ್ಲಿ ಕೊರೆದ ರೇಖೆ !’ ಎಂಬುದರ ಅನುಭವವು ನನಗೆ ಬಂದಿತು.’

**೪. ಕೃತಜ್ಞತೆ ಮತ್ತು ಪ್ರಾರ್ಥನೆ :** ಪರಾತ್ಪರ ಗುರು ಡಾಕ್ಟರರು ಈ ಅವಕಾಶವನ್ನು

卐 ——— 卐

ನೀಡಿದ್ದಕ್ಕಾಗಿ ನಾನು ಅವರ ಚರಣಗಳಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸಿ ಪ್ರಾರ್ಥನೆಯನ್ನು ಮಾಡುತ್ತೇನೆ, 'ಅವರು ನನ್ನ ಆಯುಷ್ಯದ ಕೊನೆಯ ಕ್ಷಣದವರೆಗೂ ನನ್ನಿಂದ, ಹಾಗೆಯೇ ಇತರ ಸಾಧಕರಿಂದಲೂ ಹೀಗೆಯೇ ಸೇವೆಯನ್ನು ಮಾಡಿಸಿಕೊಳ್ಳಬೇಕು.' ಈ ಗ್ರಂಥವನ್ನು ನಾನು ಅವರ ಚರಣಗಳಲ್ಲಿ ಅರ್ಪಿಸುತ್ತೇನೆ.'

– ಶ್ರೀಮತಿ ಸ್ಮಿತಾ ನವಲಕರ, ಸಂಕಲನಕಾರರು ಮತ್ತು ಜಾಹಿರಾತು ಸೇವಕಿ

卐 ——— 卐

## ಸನಾತನದ ಚೈತನ್ಯಮಯ ಗ್ರಂಥಸಂಪತ್ತಿನ ಮುಖ್ಯ ವೈಶಿಷ್ಟ್ಯಗಳು !

卐 ಅಧ್ಯಾತ್ಮದಲ್ಲಿನ ಪ್ರತಿಯೊಂದರ ಬಗ್ಗೆ 'ಏಕೆ ಮತ್ತು ಹೇಗೆ' ಎಂಬ ಉತ್ತರಗಳು !

卐 ವಿಜ್ಞಾನಯುಗದ ವಾಚಕರಿಗೆ ಅರ್ಥವಾಗುವಂತಹ ಆಧುನಿಕ ವೈಜ್ಞಾನಿಕ ಭಾಷೆಯಲ್ಲಿನ (ಉದಾ. ಕೋಷ್ಟಕ, ಶೇಕಡಾವಾರು) ಜ್ಞಾನ !

卐 ತಾತ್ತ್ವಿಕ ವಿವೇಚನೆಯಷ್ಟೇ ಅಲ್ಲ, ಸಾಧನೆಯ ಪ್ರಾಯೋಗಿಕ ಮಾರ್ಗದರ್ಶನ !

卐 ಪೃಥ್ವಿಯಲ್ಲಿ ಎಲ್ಲಿಯೂ ಸಿಗದ ಅಮೂಲ್ಯ ಈಶ್ವರೀ ಜ್ಞಾನವಿರುವ ಗ್ರಂಥ !

卐 ಅಧ್ಯಾತ್ಮದಲ್ಲಿನ ವಿವಿಧ ವಿಷಯಗಳ ಸಂದರ್ಭದಲ್ಲಿ ವೈಜ್ಞಾನಿಕ ಉಪಕರಣಗಳ ಮೂಲಕ ಮಾಡಿದ ಸಂಶೋಧನೆ, ಸೂಕ್ಷ್ಮಸ್ತರದಲ್ಲಿನ ಪ್ರಕ್ರಿಯೆಯನ್ನು ತೋರಿಸುವ ಚಿತ್ರಗಳು ಮತ್ತು ಬರವಣಿಗೆಗಳು !

**ಮೇ ೨೦೨೦ ರ ವರೆಗೆ ಸನಾತನದ ೩೩೮ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೧,೯೯,೦೦೦ ಪ್ರತಿಗಳು !**

### ಕರ್ಮಬಂಧನದಿಂದ ಮುಕ್ತರಾಗಲು ನಾಮದ ಮಹತ್ವ ಹೇಳುವ ಸನಾತನದ ಗ್ರಂಥ !

## ನಾಮಜಪದ ಮಹತ್ವ ಮತ್ತು ಲಾಭಗಳು

卐 ಭಗವಂತನ ರೂಪಕ್ಕಿಂತ ಅವನ ನಾಮವು ಏಕೆ ಮಹತ್ವದ್ದಾಗಿದೆ ?

卐 ನಾಮವು ಸದಾಚಾರಿ ಮತ್ತು ದುರಾಚಾರಿ ಎಲ್ಲರಿಗೂ ಏಕೆ ತಾರಕವಾಗಿದೆ ?

卐 ನಾಮಜಪದಿಂದ ತೊಂದರೆಗಳು ಹೇಗೆ ನಿವಾರಣೆಯಾಗುತ್ತವೆ ?

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು ‘*’ ಈ ಗುರುತಿನಲ್ಲಿ ಕೊಡಲಾಗಿದೆ.)


೧. **ಧರ್ಮಕಾರ್ಯಕ್ಕಾಗಿ ಅರ್ಪಣೆ ಪಡೆಯುವ ಸೇವೆಯೆಂದರೆ ಸಮಷ್ಟಿ ಸಾಧನೆ ಚೆನ್ನಾಗಿ ಆಗುವ ಸಹಜಸುಲಭ ಮಾರ್ಗ !** ೧೮

೨. **ಯಾವುದೇ ರೀತಿಯ ಅರ್ಪಣೆ ಪಡೆಯಲು ಎಲ್ಲರಿಗೂ ಉಪಯುಕ್ತ ಗ್ರಂಥ !** ೧೮

೩. **ಸನಾತನದ ಗ್ರಂಥಗಳು, ‘ಸನಾತನ ಪ್ರಭಾತ’ ವರ್ತಮಾನಪತ್ರಿಕೆಗಳು ಮತ್ತು ಸ್ಮರಣಿಕೆ ಇತ್ಯಾದಿಗಳಿಗೆ ಜಾಹಿರಾತು ಪಡೆಯುವ ಸಂದರ್ಭದಲ್ಲಿನ ತಾತ್ತ್ವಿಕ ಮಾಹಿತಿ** ೧೯

* ಗುರುಪೂರ್ಣಿಮೆಯ ನಿಮಿತ್ತ ಅಥವಾ ಇತರ ಜಾಹಿರಾತುಗಳನ್ನು ತೆಗೆದುಕೊಳ್ಳಲು ಯಾರನ್ನೆಲ್ಲ ಸಂಪರ್ಕಿಸಬಹುದು ? ೨೦
* ಸಾಧಕರ ದೃಷ್ಟಿಯಿಂದ ಜಾಹಿರಾತುಗಳನ್ನು ತರುವುದರ ಮಹತ್ವ ೨೪
* ಜಾಹಿರಾತು ಸೇವೆಯನ್ನು ಮಾಡುವಾಗ ಮಾಡಬೇಕಾದ ಪ್ರಾರ್ಥನೆ ಮತ್ತು ಕೃತಜ್ಞತೆ ೨೬

೪. **ಜಾಹಿರಾತುಗಳನ್ನು ಪಡೆಯುವ ಸೇವೆಯ ಬಗ್ಗೆ ಸಾಧಕರ ಮನಸ್ಸಿನಲ್ಲಿರುವ ತಪ್ಪು ಕಲ್ಪನೆಗಳು ಮತ್ತು ವಸ್ತುಸ್ಥಿತಿ** ೨೬

೫. **ಜಾಹಿರಾತುದಾರರು ಕೇಳಬಹುದಾದ ಸಂಭಾವ್ಯ ಪ್ರಶ್ನೆಗಳ ಭಯ ಮತ್ತು ಅದಕ್ಕೆ ಪರಿಹಾರೋಪಾಯಗಳು** ೨೮

೬. **ಜಾಹಿರಾತುಗಳನ್ನು ಪಡೆಯುವಾಗ ಬರುವ ಅಡಚಣೆಗಳು ಮತ್ತು ಅವುಗಳ ಉಪಾಯಗಳು** ೪೨

೭. **ಜಾಹಿರಾತು ಪಡೆಯುವ ಸೇವೆಯಲ್ಲಿ ಕೃತಿಯ ಸ್ತರದಲ್ಲಿ ಮಾಡಬೇಕಾದ ಪ್ರಯತ್ನಗಳು** ೪೪

೮. **ಜಾಹಿರಾತು ತರುವ ಸೇವೆಯಿಂದಾಗುವ ಸಾಧನೆ** ೯೪

೯. **ಪ್ರಸಾರಸೇವೆಯಿಂದ ಸಾಧಕನಿಗೆ ಸಾಧನೆಯ ದೃಷ್ಟಿಯಿಂದಾಗುವ ಲಾಭಗಳು** ೧೦೬

೧೦. **ಸಾಧಕರೇ, ‘ಜಾಹಿರಾತುಗಳನ್ನು ಪಡೆಯುವ’ ಸೇವೆಯನ್ನು ಮಾಡಿ ಪರಾತ್ಪರ ಗುರು ಡಾಕ್ಟರರು ಸಾಧನೆಗಾಗಿ ಮಾಡಿದ ಸಂಕಲ್ಪದ ಲಾಭವನ್ನು ಪಡೆದುಕೊಳ್ಳಿ !** ೧೧೦

೧೧. **ಪ್ರಾರ್ಥನೆ** ೧೧೦